1. ಈ ಕೆಳಗಿನವುಗಳಲ್ಲಿ ಸರಿಯಾದ ಗುಂಪನ್ನು ಆರಿಸಿ.

| ಇತಿಹಾಸಕಾರರು | ಗ್ರಂಥಗಳು |
|---|---|
| A. ಹೆರೋಡೋಟಸ್ | i. ಪೆಲೊಫನಿಷಿಯನ್ ವಾರ್ಸ್ |
| B. ಸಂತ ಆಗಸ್ಟೈನ್ | ii. ಎ ಸ್ಟಡಿ ಆಫ್ ಹಿಸ್ಟರಿ |
| C. ಆರ್ನಾಲ್ಡ್ ಟಾಯ್ನ್‌ಬಿ | iii. ದಾಸ್ ಕ್ಯಾಪಿಟಲ್ |
| D. ಕಾರ್ಲ್ ಮಾರ್ಕ್ಸ್ | iv. ದಿ ಹಿಸ್ಟರಿ ಆಫ್ ಪರ್ಷಿಯನ್ ವಾರ್ಸ್ |
| | v. ದಿ ಸಿಟಿ ಆಫ್ ಗಾಡ್ |

1) A-ii, B-iv, C-i, D-iii
2) A-iv, B-v, C-ii, D-iii
3) A-iv, B-iii, C-ii, D-i
4) A-ii, B-v, C-i, D-iii

2. ಈ ಕೆಳಗಿನವುಗಳಲ್ಲಿ ಸರಿಯಾದ ಹೊಂದಾಣಿಕೆಯ ಆಯ್ಕೆ ಯಾವುದು ?

A. ಈಜಿಪ್ಟ್ ನಾಗರಿಕತೆ – ಹೈರೋಗ್ಲಿಫಿಕ್ಸ್
B. ಮೆಸಪಟೋಮಿಯಾ ನಾಗರೀಕತೆ–ಜಿಗ್ಗುರಾತ್
C. ಚೀನಾ ನಾಗರೀಕತೆ – ತೂಗುವ ಉದ್ಯಾನ
D. ಸಿಂಧೂ ಬಯಲಿನ ನಾಗರೀಕತೆ – ನಗರ ರಾಜ್ಯಗಳು

1) A ಮಾತ್ರ
2) A ಮತ್ತು B ಮಾತ್ರ
3) A, B, ಮತ್ತು C ಮಾತ್ರ
4) A, B, C ಮತ್ತು D ಎಲ್ಲವೂ

3. ಅಶೋಕನನ್ನು 'ದೇವಾನಾಂಪ್ರಿಯ ಅಶೋಕನ' ಎಂದು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

1) ಬ್ರಹ್ಮಗಿರಿ
2) ಸನ್ನತಿ
3) ನಿಟ್ಟೂರು
4) ಮಸ್ಕಿ

4. ಕೆಳಕಂಡ ರಾಜವಂಶಗಳ ರಾಜಧಾನಿಗಳನ್ನು ಅನುಕ್ರಮವಾಗಿ ಜೋಡಿಸಿದ ಗುಂಪು

A. ರಾಷ್ಟ್ರಕೂಟರು
B. ಹೊಯ್ಸಳರು
C. ಗುಪ್ತರು
D. ಕುಶಾನರು

1) ಪಾಟಲೀಪುತ್ರ, ದ್ವಾರಸಮುದ್ರ, ಪುರುಷಪುರ, ಮಾನ್ಯಖೇಟ
2) ಮಾನ್ಯಖೇಟ, ದ್ವಾರಸಮುದ್ರ, ಪುರುಷಪುರ, ಪಾಟಲೀಪುತ್ರ
3) ದ್ವಾರಸಮುದ್ರ, ಪುರುಷಪುರ, ಪಾಟಲೀಪುತ್ರ, ಮಾನ್ಯಖೇಟ
4) ಮಾನ್ಯಖೇಟ, ದ್ವಾರಸಮುದ್ರ, ಪಾಟಲೀಪುತ್ರ, ಪುರುಷಪುರ

5. ಈ ಕೆಳಗಿನವುಗಳು ಬೌದ್ಧ ಸಮ್ಮೇಳನಗಳು ನಡೆದ ನಾಲ್ಕು ಕೇಂದ್ರಗಳಾಗಿವೆ. ಇವುಗಳಲ್ಲಿ ಬೌದ್ಧ ಸಮ್ಮೇಳನಗಳು ನಡೆದ



pramod@



Scanned with CamScanner

ಸರಿಯಾದ ಕಾಲಾನುಕ್ರಮಣಿಕೆಯ ಗುಂಪು

1) ರಾಜಗೃಹ → ವೈಶಾಲಿ → ಪಾಟಲೀಪುತ್ರ → ಕುಂಡಲವನ

2) ವೈಶಾಲಿ → ಪಾಟಲೀಪುತ್ರ → ಕುಂಡಲವನ → ರಾಜಗೃಹ

3) ಪಾಟಲೀಪುತ್ರ → ಕುಂಡಲವನ → ರಾಜಗೃಹ → ವೈಶಾಲಿ

4) ಕುಂಡಲವನ → ರಾಜಗೃಹ → ವೈಶಾಲಿ → ಪಾಟಲೀಪುತ್ರ

6. ಗಾಂಧಾರ ಕಲಾ ಶೈಲಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ ?

ಹೇಳಿಕೆ A : ಭಾರತ ಮತ್ತು ಅರೇಬಿಕ್ ಶೈಲಿಯ ಸಮ್ಮಿಶ್ರಣವಾಗಿದೆ.

ಹೇಳಿಕೆ B : ಮಾನವ ಸೌಂದರ್ಯದ ಅಭಿವ್ಯಕ್ತತೆ ಈ ಕಲೆಯ ಒಂದು ಪ್ರಮುಖ ಲಕ್ಷಣವಾಗಿದೆ.

1) A ಮಾತ್ರ

2) B ಮಾತ್ರ

3) A ಮತ್ತು B ಎರಡೂ ಸರಿ

4) A ಮತ್ತು B ಎರಡೂ ಸರಿಯಲ್ಲ

7. 'ಭಾರತದ ಗಿಳಿ' ಎಂದು ಹೆಸರು ಪಡೆದಿದ್ದವರು

1) ಹಸನ್ ನಿಜಾಮಿ 2) ಉತ್ಬಿ

3) ಅಲ್‌ಬೆರೂನಿ 4) ಅಮೀರ್ ಖುಸ್ರು

8. ಪ್ರತಿಪಾದನೆ (A) : ಅಕ್ಬರನು ರಜಪೂತರನ್ನು ಮನ್ಸಬ್ದಾರರನ್ನಾಗಿ ನೇಮಕ ಮಾಡಿಕೊಂಡಿದ್ದನು.

ಸಮರ್ಥನೆ (R) : ರಜಪೂತರ ಧೈರ್ಯ ಮತ್ತು ರಾಜನಿಷ್ಠೆಗಳು ಮೊಘಲ್ ಸಾಮ್ರಾಜ್ಯದ ಬಲವರ್ಧನೆಗೆ ಅಗತ್ಯವೆಂದು ಅಕ್ಬರ್ ತಿಳಿದಿದ್ದನು.

1) A ಸರಿ R ತಪ್ಪು

2) R ಸರಿ A ತಪ್ಪು

3) A ಮತ್ತು R ಎರಡೂ ಸರಿ. ಹಾಗೂ R, A ನ ಸರಿಯಾದ ವಿವರಣೆಯಾಗಿದೆ.

4) A ಮತ್ತು R ಎರಡೂ ಸರಿ. ಆದರೆ R, A ನ ಸರಿಯಾದ ವಿವರಣೆಯಲ್ಲ

9. 'ಶೈವರ ಅಜಂತಾ' ಎಂದು ಪ್ರಸಿದ್ಧಿ ಪಡೆದ ಸ್ಥಳ

1) ಹಂಪಿ 2) ಲೇಪಾಕ್ಷಿ


3) ಬಾದಾಮಿ 4) ಪಟ್ಟದಕಲ್ಲು

10. ಭಾರತೀಯ ಪುರಾತತ್ವ ಇಲಾಖೆಯನ್ನು ಸ್ಥಾಪಿಸಿದವರು

1) ಲಾರ್ಡ್ ಕರ್ಜನ್ 2) ಸರ್ ಜಾನ್ ಮಾರ್ಷಲ್

3) ಕನ್ನಿಂಗ್ ಹ್ಯಾಮ್ 4) ಬಿ.ಎಲ್.ರೈಸ್

11. ಇಲ್ಲಿ ಕೊಟ್ಟಿರುವ ಭೂಪಟದಲ್ಲಿ ಪೋರ್ಚುಗೀಸ್ (P), ಇಂಗ್ಲಿಷರು (E), ಡಚ್ಚರು (D) ಮತ್ತು ಫ್ರೆಂಚರು (F) ವ್ಯಾಪಾರ ಕೇಂದ್ರಗಳನ್ನು ಗುರುತಿಸಲಾಗಿದೆ.




ಈ ಕೆಳಗಿನ ಯಾವ ಗುಂಪು ವ್ಯಾಪಾರ ಕೇಂದ್ರಗಳನ್ನು DPEF ಸರಣಿಯಲ್ಲಿ ಜೋಡಿಸಿದ ಗುಂಪಾಗಿದೆ ?

1) d b a c 2) a c d b

3) d a b c 4) b d c a

12. ಈ ಕೆಳಗಿನವರಲ್ಲಿ ಯಾರು 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ'ದೊಂದಿಗೆ ಸಂಬಂಧ ಹೊಂದಿಲ್ಲ?

1) ಬೇಗಂ ಹಜರತ್ ಮಹಲ್

2) ಬಹದ್ದೂರ್ ಷಾ

3) ನಾನಾ ಸಾಹೇಬ್

4) ರಾಸ್ ಬಿಹಾರಿ ಬೋಸ್

13. ಈ ಕೆಳಗಿನವುಗಳಲ್ಲಿ ಯಾವುದು ಬ್ರಿಟಿಷ್ ಪೂರ್ವ ಭಾರತೀಯ ಭೂ ಕಂದಾಯ ವ್ಯವಸ್ಥೆಯ ಲಕ್ಷಣವಲ್ಲ ?

1) ಕಂದಾಯ ವಸೂಲಾತಿಯ ಹಕ್ಕನ್ನು ರಾಜರು ಹೊಂದಿದ್ದರು.

2) ಭೂಮಿಯ ಒಡೆತನವು ಹಳ್ಳಿಯಲ್ಲಿಯೇ ಉಳಿದಿತ್ತು

3) ರೈತರು ಹೊಂದಿದ ಜಮೀನಿನ ಪ್ರಮಾಣದಲ್ಲಿ ಕಂದಾಯ ದರವನ್ನು ನಿಗದಿಪಡಿಸಲಾಗುತ್ತಿತ್ತು.

4) ತೆರಿಗೆ ಸಂಗ್ರಹಕ್ಕಾಗಿ ಹರಾಜು ಪದ್ಧತಿ ಜಾರಿಯಲ್ಲಿದ್ದಿತು.

14. ಪ್ರತಿಪಾದನೆ (A) : ಸ್ವಾಮಿ ದಯಾನಂದ ಸರಸ್ವತಿಯವರು ಶುದ್ಧಿ ಚಳುವಳಿಯನ್ನು ಪ್ರಾರಂಭಿಸಿದ್ದರು.

ಸಮರ್ಥನೆ (R) : ಅವರು ಮತಾಂತರಗೊಂಡವರನ್ನು

pramod@




Scanned with CamScanner

2) 800 ಮತ್ತು 500

3) 600 ಮತ್ತು 500


4) 500 ಮತ್ತು 600

23. ಈ ಕೆಳಗಿನ ಚಿತ್ರದಲ್ಲಿ ನದಿಯ ಪಾತ್ರದ ಹಂತಗಳನ್ನು ತೋರಿಸಲಾಗಿದೆ. ಈ ಹಂತಗಳಲ್ಲಿ ಉಂಟಾಗುವ ಭೂ ಸ್ವರೂಪಗಳ ಸರಿಯಾದ ಅನುಕ್ರಮವನ್ನು ಗುರುತಿಸಿ.




| ಹಂತ - 01 | ಹಂತ -02 | ಹಂತ-03 |
|---|---|---|
| 1) ನದಿಯ ತಿರುವುಗಳು | ಮುಖಜ ಭೂಮಿ | ಜಲಪಾತಗಳು |
| 2) ಕಂದರಗಳು | ನದಿಯ ತಿರುವುಗಳು | ಶೃಂಗ ಸರೋವರಗಳು |
| 3) ಜಲಪಾತಗಳು | ಪ್ರವಾಹ ಮೈದಾನಗಳು | ನದಿಯ ತಿರುವುಗಳು |
| 4) ಜಲಪಾತಗಳು | 'V'ಆಕಾರದ ಕಣಿವೆಗಳು | ಮೆಕ್ಕಲು ಬೀಸಣಿಗೆ |

24. ಈ ಕೆಳಗಿನ ಭಾರತದ ನಕ್ಷೆಯಲ್ಲಿ A ಮತ್ತು B ರೇಖೆಗಳು ಈ ಅಕ್ಷಾಂಶಗಳನ್ನು ಸೂಚಿಸುತ್ತದೆ.




1) 8°4' ಉತ್ತರ ಅಕ್ಷಾಂಶ ಮತ್ತು 37°6' ಉತ್ತರ ಅಕ್ಷಾಂಶ

2) 8°4' ದಕ್ಷಿಣ ಅಕ್ಷಾಂಶ ಮತ್ತು 37°6 ಉತ್ತರ ಅಕ್ಷಾಂಶ

3) 37°6' ಉತ್ತರ ಅಕ್ಷಾಂಶ ಮತ್ತು 8°4' ಉತ್ತರ ಅಕ್ಷಾಂಶ

4) 37°6' ದಕ್ಷಿಣ ಅಕ್ಷಾಂಶ ಮತ್ತು 8°4' ಉತ್ತರ ಅಕ್ಷಾಂಶ

25. ಕೆಳಗಿನ ಪಟ್ಟಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳನ್ನು ನೀಡಲಾಗಿದೆ.

| | |
|---|---|
| 1. ಅರಣ್ಯಗಳು | 2. ಖನಿಜಗಳು |
| 3. ಪೆಟ್ರೋಲಿಯಂ | 4. ಸೂರ್ಯನ ಶಾಖ |
| 5. ನೀರು | 6. ನೈಸರ್ಗಿಕ ಅನಿಲ |

ಈ ಕೆಳಗಿನ ಯಾವ ಗುಂಪು ಕ್ರಮವಾಗಿ ನವೀಕರಿಸುವ ಮತ್ತು ನವೀಕರಿಸಲಾಗದ ಸಂಪನ್ಮೂಲಗಳ ಗುಂಪಾಗಿದೆ ?

1) 2 3 6 ಮತ್ತು 1 4 5   2) 1 4 5 ಮತ್ತು 2 3 6

3) 4 5 6 ಮತ್ತು 1 2 3   4) 1 2 3 ಮತ್ತು 4 5 6

26. ಪ್ರತಿಪಾದನೆ (A) : ಹಸಿರು ಕ್ರಾಂತಿಯ ಸಮಯದಲ್ಲಿ ಸರ್ಕಾರವು ಸಹಾಯಧನ ವ್ಯವಸ್ಥೆಯನ್ನು ಜಾರಿಗೊಳಿಸಿತು.

ಸಮರ್ಥನೆ (R) : ಹಸಿರು ಕ್ರಾಂತಿಯ ತಂತ್ರಜ್ಞಾನದ ಲಾಭವು ಬಡ ಮತ್ತು ಸಣ್ಣ ರೈತರಿಗೆ ತಲುಪಿಸಬೇಕಾಗಿತ್ತು.

1) A ಸರಿ ಆದರೆ R ತಪ್ಪು

2) R ಸರಿ ಆದರೆ A ತಪ್ಪು

3) A ಮತ್ತು R ಎರಡೂ ಸರಿ ಮತ್ತು R, A ನ ಸರಿಯಾದ ವಿವರಣೆಯಾಗಿದೆ.

4) A ಮತ್ತು R ಎರಡೂ ಸರಿ ಆದರೆ R, A ನ ಸರಿಯಾದ ವಿವರಣೆಯಲ್ಲ

27. ಈ ಕೆಳಗಿನವುಗಳಲ್ಲಿ ಯಾವ ತುರ್ತು ಪರಿಸ್ಥಿತಿಯನ್ನು ಭಾರತದ ಸಂವಿಧಾನವು ಮಾನ್ಯ ಮಾಡಿರುವುದಿಲ್ಲ ?

1) ಹಣಕಾಸಿನ ಬಿಕ್ಕಟ್ಟುಗಳು

2) ನೈಸರ್ಗಿಕ ವಿಕೋಪಗಳ ಸನ್ನಿವೇಶಗಳು

3) ರಾಜ್ಯಗಳ ಸಾಂವಿಧಾನಿಕ ಕಾರ್ಯಯಂತ್ರದ ವಿಫಲತೆ

4) ಆಂತರಿಕ ತೊಂದರೆ ಮತ್ತು ಬಾಹ್ಯ ಆಕ್ರಮಣಗಳು

28. ಈ ಕೆಳಗಿನವರಲ್ಲಿ ಯಾರು ಗ್ರಾಮ ಪಂಚಾಯಿತಿಗಳಲ್ಲಿ ಸರ್ಕಾರದಿಂದ ನೇಮಕಗೊಳ್ಳುವವರಾಗಿದ್ದಾರೆ.

1) ಅಧ್ಯಕ್ಷರು   2) ಉಪಾಧ್ಯಕ್ಷರು

3) ಅಭಿವೃದ್ಧಿ ಅಧಿಕಾರಿ   4) ಸದಸ್ಯರು

29. ಈ ಕೆಳಗಿನವರುಗಳಲ್ಲಿ ಯಾರು ಭಾರತದ ರಾಷ್ಟ್ರಪತಿಯವರಿಂದ ನೇಮಕಗೊಳ್ಳುವುದಿಲ್ಲ ?

1) ರಾಯಭಾರಿಗಳು

2) ಲೋಕಸಭೆಯ ಸ್ಪೀಕರ್

3) ಚುನಾವಣಾ ಆಯುಕ್ತರು

4) ರಾಜ್ಯದ ರಾಜ್ಯಪಾಲರು

30. ಭಾರತದ ಸಂವಿಧಾನದ ಕೆಲವು ಲಕ್ಷಣಗಳನ್ನು ಈ ಕೆಳಗೆ ನೀಡಲಾಗಿದೆ.

1. ಸಮಾಜವಾದಿ   2. ವ್ಯಕ್ತಿ ಸ್ವಾತಂತ್ರ್ಯ

3. ಸಾರ್ವಭೌಮತ್ವ   4. ಜಾತ್ಯತೀತ

ಈ ಮೇಲಿನವುಗಳಲ್ಲಿ ಯಾವುದನ್ನು ಸಂವಿಧಾನದ 42ನೇ ತಿದ್ದುಪಡಿಯಂತೆ ಸೇರಿಸಲಾಗಿದೆ ?

1) 1 ಮತ್ತು 2 ಮಾತ್ರ   2) 2 ಮತ್ತು 3 ಮಾತ್ರ



pramod@

Scanned with CamScanner

3) 1, 3 ಮತ್ತು 4 ಮಾತ್ರ 4) 1 ಮತ್ತು 4 ಮಾತ್ರ

31. ಈ ಕೆಳಗಿನ ಹೇಳಿಕೆಗಳು ಸರಿ (T) ಅಥವಾ ತಪ್ಪು (F) ಎಂಬ ಅನುಕ್ರಮವಾದ ಜೋಡಣೆಯನ್ನು ಆಯ್ಕೆ ಮಾಡಿ.

1. ಹಣಕಾಸಿನ ಮಸೂದೆಯನ್ನು ಮೊದಲು ರಾಜ್ಯಸಭೆಯಲ್ಲಿಯೇ ಮಂಡಿಸಬೇಕು.

2. ಲೋಕಸಭೆ ಮತ್ತು ರಾಜ್ಯಸಭೆಗಳೆರಡೂ ಸಂವಿಧಾನ ತಿದ್ದುಪಡಿಯ ಅಧಿಕಾರವನ್ನು ಹೊಂದಿವೆ.

3. ಸಂಸತ್ತು ಎರಡು ಅಥವಾ ಅದಕ್ಕಿಂತ ಹೆಚ್ಚು ರಾಜ್ಯಗಳಿಗೆ ಒಂದೇ ಉಚ್ಚ ನ್ಯಾಯಾಲಯ ಸ್ಥಾಪನೆ ಮಾಡುವ ಅಧಿಕಾರ ಹೊಂದಿದೆ.

4. ಸಚಿವರು ವೈಯಕ್ತಿಕವಾಗಿ ರಾಷ್ಟ್ರಪತಿಯವರಿಗೆ ಜವಾಬ್ದಾರರಾಗಿರುತ್ತಾರೆಯೇ ಹೊರತು ಸಾಮೂಹಿಕವಾಗಿ ಲೋಕಸಭೆಗಲ್ಲ.

1) TTFF 2) TFFT
3) FTTF 4) FFTT

32. ಪಟ್ಟಿ-Aನಲ್ಲಿ 'ಪರಿಕಲ್ಪನೆಗಳು' ಮತ್ತು ಪಟ್ಟಿ-Bಯಲ್ಲಿ ಅವುಗಳ 'ಅರ್ಥವಿವರಣೆ' ನೀಡಿದ್ದು, ಅವುಗಳನ್ನು ಹೊಂದಿಸಿ:

| | |
|---|---|
| A. ಗಣರಾಜ್ಯ | i. ರಾಷ್ಟ್ರವು ಆಂತರಿಕ ಮತ್ತು ಬಾಹ್ಯಶಕ್ತಿಗಳಿಂದ ಸ್ವಾತಂತ್ರ್ಯ |
| B. ಸಾರ್ವಭೌಮತೆ | ii. ಕೇಂದ್ರ ಮತ್ತು ಸರ್ಕಾರಗಳ ನಡುವೆ ಅಧಿಕಾರ ಹಂಚಿಕೆ |
| C. ಜಾತ್ಯತೀತತೆ | iii. ರಾಷ್ಟ್ರದ ಮುಖ್ಯಸ್ಥರು ಜನರಿಂದ ಆಯ್ಕೆ |
| D. ಸಮಾಜವಾದಿ | iv. ರಾಷ್ಟ್ರೀಯ ಆದಾಯದ ಸಮಾನ ಹಂಚಿಕೆ |
| | v. ಜನರು ತಮ್ಮ ಆಯ್ಕೆಯ ಧರ್ಮದ ಅನುಸರಣೆ |

1) A-i, B - iii, C - ii, D- iv
2) A-ii, B - iii, C - iv, D- i
3) A-iii, B - i, C - v, D- iv
4) A-ii, B - iv, C - v, D- iii

33. 1946ರಲ್ಲಿ ರಚನೆಗೊಂಡ ಭಾರತದ ಮಧ್ಯಂತರ ಸರ್ಕಾರದ ಸಚಿವರುಗಳ ಹೆಸರುಗಳನ್ನು ಪಟ್ಟಿ-I ರಲ್ಲಿ ಮತ್ತು ಅವರುಗಳು ನಿರ್ವಹಿಸಿದ ಖಾತೆಗಳನ್ನು ಪಟ್ಟಿ-II ರಲ್ಲಿ ನೀಡಲಾಗಿದೆ. ಅವುಗಳನ್ನು ಹೊಂದಿಸಿ.

| ಪಟ್ಟಿ-I | ಪಟ್ಟಿ-II |
|---|---|
| a. ವಲ್ಲಭಬಾಯಿ ಪಟೇಲ್ | i. ಕಾರ್ಮಿಕ |
| b. ಜಗಜೀವನ್‌ರಾಮ್ | ii. ಗೃಹ |
| c. ರಾಜಕುಮಾರಿ ಅಮೃತಾಕೌರ್ | iii. ಶಿಕ್ಷಣ |
| d. ಅಬ್ದುಲ್ ಕಲಾಮ್ ಆಜಾದ್ | iv. ಆರೋಗ್ಯ |
| | v. ನೀರಾವರಿ |

1) a-ii, b - i, c - iii, d- iv
2) a-iii, B - v, c - iv, d- ii
3) a-ii, b - iv, c - v, d- iii
4) a-ii, B - i, c - iv, d- iii

34. ಇವುಗಳನ್ನು ಹೊಂದಿಸಿ.

| ಪಟ್ಟಿ-I | ಪಟ್ಟಿ-II |
|---|---|
| a. ಸಾರ್ವತ್ರಿಕ ಚುನಾವಣೆ | i. ಚುನಾವಣಾ ಅಕ್ರಮಗಳ ಕಾರಣದಿಂದ ನಡೆಯುವ ಚುನಾವಣೆ |
| b. ಮರುಚುನಾವಣೆ | ii. ನಿಯತಕಾಲಿಕವಾಗಿ ನಡೆಯುವ ಚುನಾವಣೆ |
| c. ಉಪಚುನಾವಣೆ | iii. ಅಧಿಕಾರವಧಿಗೂ ಮುನ್ನ ಶಾಸನಸಭೆಯ ವಿಸರ್ಜನೆಯ ಕಾರಣದಿಂದ ನಡೆಯುವ ಚುನಾವಣೆ |
| d. ಮಧ್ಯಂತರ ಚುನಾವಣೆ | iv. ಪ್ರತಿನಿಧಿಯ ರಾಜೀನಾಮೆ/ ಮರಣದ ಕಾರಣದಿಂದ ನಡೆಯುವ ಚುನಾವಣೆ |

ಸರಿಯಾದ ಸಂಕೇತಗಳನ್ನು ಆಯ್ಕೆ ಮಾಡಿ.

| | a | b | c | d |
|---|---|---|---|---|
| 1) | ii | i | iv | iii |
| 2) | ii | iv | iii | i |
| 3) | iii | i | ii | iv |
| 4) | ii | iv | i | iii |

35. ಒಂದು ಮಸೂದೆಯು ಕಾಯಿದೆಯಾಗಿ ರೂಪುಗೊಳ್ಳುವ ಹಂತಗಳ ಸರಿಯಾದ ಅನುಕ್ರಮಣಿಕೆಯನ್ನು ಗುರುತಿಸಿ.

a. ಸಮಿತಿಯ ಮಟ್ಟಕ್ಕೆ ಒಪ್ಪಿಸುವುದು 2
b. ರಾಷ್ಟ್ರಪತಿಯವರ ಅನುಮೋದನೆ 4
c. ಗೆಜೆಟ್‌ನಲ್ಲಿ ಪ್ರಕಟ 1
d. ವರದಿಯ ಹಂತದ ವಿಮರ್ಶೆ 3

1) c a d b 2) a d b c
3) d a b c 4) a d c b

36. ಬುಡಕಟ್ಟು ಜನರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಉದ್ಯಾನವನಗಳನ್ನು ನಿರ್ಮಿಸಬೇಕೆಂದು ಸಲಹೆ



pramod@
Scanned with CamScanner

ನೀಡಿದವರು

1) ಜೆ.ಎಚ್. ಹಟನ್ 2) ವೆರಿಯರ್ ಎಲ್ವಿನ್

3) ಠಕ್ಕರ್ ಬಾಪಾ 4) ಜಿ.ಎಸ್. ಘುರ್ಯೆ

37. ಭಾರತ ಸರ್ಕಾರವು 'ಮಹಿಳಾ ಸಬಲೀಕರಣ ವರ್ಷ' ಎಂದು ಘೋಷಿಸಿದ ವರ್ಷ

1) 2001 2) 2011

3) 1992 4) 1995

38. ಪಟ್ಟಿ- A ಯಲ್ಲಿ 'ಚಿಂತಕರು'ಗಳನ್ನು ಪಟ್ಟಿ-B ಯಲ್ಲಿ 'ಮಾಧ್ಯಮಗಳ' ಮಹತ್ವದ ಬಗ್ಗೆ ಅವರು ನೀಡಿರುವ ಉಲ್ಲೇಖಗಳನ್ನು ನೀಡಲಾಗಿದೆ. ಅವುಗಳನ್ನು ಹೊಂದಿಸಿ.

| ಪಟ್ಟಿ-I | ಪಟ್ಟಿ-II |
|---|---|
| a. ರಾಬರ್ಟ್ ಪುಟ್ನಂ | i. ಸಾಂಸ್ಕೃತಿಕ ಉದ್ದಿಮೆ |
| b. ಹಾರ್ಕ್ ಹೈಮರ್ | ii. ಕೃತಕ ನೈಜತೆ |
| c. ಜರ್ಗೆನ್ ಹೆಬರ್‌ಮಾಸ್ | iii. ಸಾಮಾಜಿಕ ಬಂಡವಾಳ |
| d. ಜೀನ್ ಬುಡ್ರಿಲಾರ್ಡ್ | iv. ಸಾಮಾಜಿಕ ವಲಯ |

| | a | b | c | d |
|---|---|---|---|---|
| 1) | ii | iv | i | iii |
| 2) | iv | ii | iii | i |
| 3) | i | iii | ii | iv |
| 4) | iii | i | iv | ii |

39. ಅಸ್ಪೃಶ್ಯತಾ ಅಪರಾಧ ಕಾಯ್ದೆಯು ತಿದ್ದುಪಡಿಯಾದ ರೂಪ

1) ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯಿದೆ

2) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗ

3) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪುನರ್ವಸತೀಕರಣ ಕಾಯಿದೆ

4) ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ

40. ಕರ್ನಾಟಕದ ಪ್ರಥಮ ಹಿಂದುಳಿದ ವರ್ಗಗಳ ಆಯೋಗವನ್ನು ಇವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು.

1) ಎಲ್.ಜಿ. ಹಾವನೂರ್ 2) ಚಿನ್ನಪ್ಪ ರೆಡ್ಡಿ

3) ನಾಗನಗೌಡ 4) ವೆಂಕಟಸ್ವಾಮಿ

41. ಗಣಕಯಂತ್ರಾಧಾರಿತ ಸಮಾಜ – ವಿಜ್ಞಾನ ಬೋಧನೆಯನ್ನು ಮಾಡುವಾಗ ಶಿಕ್ಷಕನ ಪಾತ್ರ

1) ಮುಖ್ಯ ಕಾರ್ಯವಿಧಿ ನಿಯೋಜಕ

2) ಕಾರ್ಯವಿಧಿ ನಿಯೋಜಕ

3) ಕಲಿಸುವವ

4) ಸ್ನೇಹಿತ

42. ಕ್ರಮಾನುಗತ ಬೋಧನೆಯ ಮೂಲತತ್ವಗಳನ್ನು ರೂಪಿಸಿದ ಈ ಪರಿಣತ ಶಾಸ್ತ್ರಜ್ಞನೆಂದರೆ

1) ಥಾಮಸ್ ಎಫ್ ಗಿಲ್‌ಬರ್ಟ್

2) ರಾಬರ್ಟ್ ಮೇಜರ್

3) ಬಿ.ಎಫ್. ಸ್ಕಿನ್ನರ್ B,F ಸ್ಕಿನ್ನರ್

4) ನಾರ್ಮನ್ ಎ. ಕ್ರೌಡರ್

43. 'ಪಠ್ಯವಸ್ತು' ಎಂದರೆ ಶಾಲೆಯಲ್ಲಿ ಮಗುವು ಪಡೆಯುವ ಒಟ್ಟು ಅನುಭವದ ಮೊತ್ತ. ಈ ಹೇಳಿಕೆಯನ್ನು ನೀಡಿದವರು.

1) ರಾಷ್ಟ್ರೀಯ ಶಿಕ್ಷಣ ಆಯೋಗ

2) ಮಾಧ್ಯಮಿಕ ಶಿಕ್ಷಣ ಆಯೋಗ

3) ವಿಶ್ವ-ವಿದ್ಯಾಲಯ ಶಿಕ್ಷಣ ಆಯೋಗ

4) ರಾಷ್ಟ್ರೀಯ ಶಿಕ್ಷಣ ನೀತಿ

44. ಬೋಧನೆಯಲ್ಲಿ ಪಾಠೋಪಕರಣಗಳ ಬಳಕೆಯು ಈ ತತ್ವದ ಆಧಾರದ ಮೇಲಿದೆ.

1) ಕಲಿಕಾ ತತ್ವ 2) ಮನಃಶಾಸ್ತ್ರ

3) ಭಾವನಾ ತತ್ವ 4) ತಂತ್ರಜ್ಞಾನ ತತ್ವ

45. ಕಲಿಕಾ ಅನುಭವಗಳನ್ನು ರಚಿಸುವಾಗ ಗಮನಿಸುವ ದೃಷ್ಟಿಕೋನ

1) ವಿಷಯ ಮತ್ತು ವಿದ್ಯಾರ್ಥಿ

2) ಉದ್ದೇಶಗಳು ಮತ್ತು ವಿಷಯ

3) ಉಪಾಧ್ಯಾಯ ಮತ್ತು ವಿಷಯ

4) ಶಿಕ್ಷಕ ಮತ್ತು ವಿದ್ಯಾರ್ಥಿ

46. ಘಟಕ ಪರೀಕ್ಷೆಯನ್ನು ನಡೆಸುವ ಮುಖ್ಯ ಉದ್ದೇಶ

1) ಶಿಕ್ಷಕರ ಬೋಧನೆಯಲ್ಲಿನ ದೋಷವನ್ನು ಕಂಡುಹಿಡಿಯಲು

2) ವಿದ್ಯಾರ್ಥಿಗಳ ವರ್ತನೆಯ ಮೌಲ್ಯಮಾಪನ

3) ವಿಷಯದ ಮೌಲ್ಯಮಾಪನ

4) ವಿಷಯ ಮತ್ತು ವಿದ್ಯಾರ್ಥಿಗಳ ವರ್ತನೆಯ ಮೌಲ್ಯಮಾಪನ

47. ಪಾಠ ಯೋಜನೆಯ ಅರ್ಥ

1) ಬೋಧನೆಯ ಪೂರ್ವ ಸಿದ್ಧತೆ

2) ಕಲಿಕೆಗೆ ಪೂರ್ವ ಸಿದ್ಧತೆ

3) ಪ್ರೇರಣೆಯ ಪ್ರಕ್ರಿಯೆ

4) ವಿಷಯವಾರು ಪೂರ್ವಸಿದ್ಧತೆ

48. ಈ ಕೆಳಗಿನ ಯಾವ ಅಂಶವು 'ರಚನಾತ್ಮಕ ಕಲಿಕಾ' ಸನ್ನಿವೇಶದ ಭಾಗವಾಗಿದೆ ?

1) ಜ್ಞಾನಾತ್ಮಕ ಶಿಷ್ಯ ವೃತ್ತಿಯ ಅವಧಿ

2) ಅರಿವಿನ ಆಧಾರದ ಮೇಲೆ ಉತ್ತರ ಬರೆಯುವ ಅಭ್ಯಾಸ

3) ಸಾಂದರ್ಭಿಕತೆ/ ಸಂದರ್ಭೋಚಿತತೆ

4) ಬಹುಮುಖಿ ಪ್ರದರ್ಶನ

pramod@



Scanned with CamScanner

49. ಭೂಗೋಳಶಾಸ್ತ್ರ ಬೋಧನೆಗೆ ಒಂದು ಪ್ರತ್ಯೇಕ ಭೂಗೋಳ ಪ್ರಯೋಗಶಾಲೆ ಅವಶ್ಯಕತೆಯಿದೆ. ಏಕೆಂದರೆ

1) ಭೂಗೋಳಶಾಸ್ತ್ರದ ಕಲಿಕೆಯನ್ನು ಹೆಚ್ಚು ನೈಜಗೊಳಿಸಲು
2) ವಿಷಯದ ಪ್ರಾಮುಖ್ಯತೆಯನ್ನು ಒತ್ತಿಹೇಳಲು
3) ಭೂಗೋಳ ವಿಷಯವು ಪ್ರಪಂಚದ ಬೇರೆ - ಬೇರೆ ಪ್ರಾದೇಶಿಕ ವಿಷಯಗಳಿಗೆ ಸಂಬಂಧಿಸಿರುವುದರಿಂದ
4) ಬೋಧನಾ ಸಾಮಗ್ರಿಗಳು ಬೋಧನೆಗೆ ಶೀಘ್ರ ಕೈಗೆ ಸಿಗುವಂತಿರಲು

50. ಅಣು - ಬೋಧನೆಯ ಮುಖ್ಯ ಉದ್ದೇಶ

1) ವಿದ್ಯಾರ್ಥಿಗಳ ವರ್ತನೆಯನ್ನು ಪರೀಕ್ಷಿಸುವುದು
2) ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಪರೀಕ್ಷಿಸುವುದು
3) ಬೋಧನೆಯಲ್ಲಿರುವ ಕ್ಲಿಷ್ಟತೆಯನ್ನು ನಿವಾರಿಸುವುದು
4) ವಿದ್ಯಾರ್ಥಿಗಳಲ್ಲಿ ವಿಷಯ ಜ್ಞಾನವನ್ನು ಬೆಳೆಸುವುದು

51. ಈ ಕೆಳಗೆ ಕೊಟ್ಟಿರುವ ಬೋಧನಾ ಉದ್ದೇಶಗಳಲ್ಲಿ ಮನೋ-ಚಾಲನ ವಲಯಕ್ಕೆ ಸಂಬಂಧಿಸಿದ ಬೋಧನಾ ಉದ್ದೇಶವೆಂದರೆ

1) ಆಸಕ್ತಿ
2) ಕೌಶಲ್ಯ
3) ತಿಳುವಳಿಕೆ
4) ಅನ್ವಯ

52. "ಚರ್ಚಾ ವಿಧಾನದ" ಪ್ರಮುಖ ಉದ್ದೇಶವೆಂದರೆ

1) ವೈಯಕ್ತಿಕ ತೀರ್ಮಾನ
2) ಸಾಮೂಹಿಕ ನಿರ್ಧಾರ ಮತ್ತು ವೈಯಕ್ತಿಕ ಆಲೋಚನೆ
3) ವೈಯಕ್ತಿಕ ಆಲೋಚನೆ ಮತ್ತು ತೀರ್ಮಾನ
4) ಸಾಮೂಹಿಕ ಆಲೋಚನೆ ಮತ್ತು ತೀರ್ಮಾನ

53. 'ಹರಪ್ಪಾ ನಾಗರಿಕತೆ' ಈ ಪಾಠದ ಬೋಧನೆಗೆ ಹೆಚ್ಚು ಸೂಕ್ತವಾದ ಬೋಧನಾ ವಿಧಾನ

A. ನಾಟಕೀಕರಣ
B. ಮೂಲಾಧಾರ
C. ಸಮಸ್ಯಾ ಪರಿಹಾರ
D. ಯೋಜನಾ ವಿಧಾನ

1) A ಮತ್ತು B ಮಾತ್ರ
2) C ಮತ್ತು D ಮಾತ್ರ
3) B ಮತ್ತು D ಮಾತ್ರ
4) C ಮತ್ತು A ಮಾತ್ರ

54. ಈ ಕೆಳಗಿನ ಯಾವ ಆಧಾರವು ಇತಿಹಾಸದ ವಿಷಯವನ್ನು ಪರಿಣಾಮಕಾರಿಯಾಗಿ ಬೋಧಿಸಲು ಪ್ರಾಥಮಿಕ ಆಧಾರ ವಾಗಿದೆ ?

1) ಸ್ಮಾರಕಗಳು
2) ದಿನಪತ್ರಿಕೆ
3) ಪುಸ್ತಕಗಳು
4) ಸಂದರ್ಶಕರ ದಾಖಲೆಗಳು

55. ಈ ಕೆಳಗಿನವುಗಳಲ್ಲಿ ಯಾವುದು ಶಿಕ್ಷಕರ ನಡುವೆ ವ್ಯವಸ್ಥಿತ ಚರ್ಚೆಯಲ್ಲ ?

1) ತರಗತಿಯಲ್ಲಿ ಪಾಠದ ನಡುವೆ ನಡೆವ ಚರ್ಚೆ
2) ಚರ್ಚಾ ಗೋಷ್ಠಿ
3) ವಿಚಾರ ಸಂಕಿರಣ
4) ವಿಚಾರ ಗೋಷ್ಠಿ

56. 'ಬಡತನ ಮತ್ತು ಹಸಿವು' ಈ ಪಾಠವನ್ನು ಪರಿಣಾಮಕಾರಿಯಾಗಿ ಬೋಧಿಸುವಾಗ ಈ ಕೆಳಗಿನ ಯಾವ ವಿಷಯಗಳ ಜ್ಞಾನ ಅತ್ಯಂತ ಅವಶ್ಯಕವಾಗಿದೆ ?
ಈ ಕೆಳಗೆ ಕೊಟ್ಟಿರುವ ಕೋಡನ್ನು ಬಳಸಿ ಸರಿಯಾದ ಉತ್ತರವನ್ನು ಸೂಚಿಸಿ.

A. ಸಾಹಿತ್ಯ
B. ಇತಿಹಾಸ
C. ಅರ್ಥಶಾಸ್ತ್ರ
D. ಸಮಾಜಶಾಸ್ತ್ರ

1) A ಮತ್ತು B ಮಾತ್ರ
2) B ಮತ್ತು D ಮಾತ್ರ
3) D ಮತ್ತು A ಮಾತ್ರ
4) C ಮತ್ತು D ಮಾತ್ರ

57. ವಿದ್ಯಾರ್ಥಿಗಳ ಭಾಷಾ ಸಾಮರ್ಥ್ಯವನ್ನು ಈ ಕೆಳಗಿನ ಯಾವ ವಿಧದ ಪರೀಕ್ಷೆಯಿಂದ ವ್ಯಾಪಕವಾಗಿ ಅಳೆಯ ಬಹುದಾಗಿದೆ?

1) ಬಹು - ಆಯ್ಕೆ ಮಾದರಿ ಪರೀಕ್ಷೆ
2) ಪ್ರಬಂಧ ಮಾದರಿ ಪರೀಕ್ಷೆ
3) ಲಘು - ಉತ್ತರ ಮಾದರಿ ಪರೀಕ್ಷೆ
4) ಪ್ರಾಯೋಗಿಕ ಮಾದರಿ ಪರೀಕ್ಷೆ

58. ವಿದ್ಯಾರ್ಥಿಗಳಲ್ಲಿ ಬೌದ್ಧಿಕ ಬೆಳವಣಿಗೆಯನ್ನು ಅಭಿವೃದ್ಧಿ ಪಡಿಸಲು ಶಿಕ್ಷಕನಿಗೆ ಈ ಕೆಳಗಿನ ಯಾವ ಅಂಶವು ಅಗತ್ಯ ವಾಗಿದೆ ?

I. ವಿವಿಧ ಸಂಸ್ಕೃತಿ, ಉಪ-ಸಂಸ್ಕೃತಿಗಳ ಜ್ಞಾನವನ್ನು ಹೊಂದುವುದು
II. ಸದಾ ಅಭಿವೃದ್ಧಿಶೀಲ ಮತ್ತು ತೆರೆದ ಮನಸ್ಸಿನವನಾಗಿರುವುದು
III. ಭಕ್ತಿ ಮತ್ತು ಧರ್ಮ ಶ್ರದ್ಧೆಯುಳ್ಳವರಾಗಿರುವುದು.
IV. ತರಗತಿಯ ಸಂವಹನ ಕೌಶಲ.

ಈ ಕೆಳಗಿನ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಸಂಕೇತಗಳ ಮೂಲಕ ಸೂಚಿಸಿ.

1) I ಮತ್ತು II
2) III ಮತ್ತು IV
3) III ಮತ್ತು II
4) I ಮತ್ತು IV

59. ಈ ಕೆಳಗಿನ ಯಾವ ಮೌಲ್ಯವು ವಿದ್ಯಾರ್ಥಿಗಳಲ್ಲಿ ಪ್ರಪಂಚದ ಭೌಗೋಳಿಕ ಮತ್ತು ಆರ್ಥಿಕ ಪರಿಕಲ್ಪನೆಗಳ ಬಗ್ಗೆ ತಾರ್ಕಿಕ ಮನೋಭಾವನೆಯನ್ನು ಬೆಳಸುವುದು ?

1) ಸೌಂದರ್ಯೋಪಾಸನೆ
2) ಸಾಂಸ್ಕೃತಿಕ
3) ಉಪಯುಕ್ತತೆ
4) ಬೌದ್ಧಿಕ

60. ಈ ಕೆಳಗಿನ ಬೋಧನಾ ಪ್ರಕ್ರಿಯೆಯ ಹಂತಗಳನ್ನು ಅನುಕ್ರಮವಾಗಿ ಜೋಡಿಸಿ.

I. ಪ್ರಸ್ತುತ ಜ್ಞಾನವನ್ನು ಪೂರ್ವಜ್ಞಾನಕ್ಕೆ ಹೊಂದಿಸುವುದು
II. ಮೌಲ್ಯಮಾಪನ
III. ಬೋಧನಾ ಉದ್ದೇಶಗಳನ್ನು ರಚಿಸುವುದು.
IV. ಬೋಧನಾ ಸಾಮಗ್ರಿಗಳನ್ನು ಪ್ರಸ್ತುತಪಡಿಸುವಿಕೆ

ಸರಿಯಾದ ಉತ್ತರವನ್ನು ಸೂಕ್ತ ಕೋಡ್ ಮೂಲಕ ಸೂಚಿಸಿ.

1) I, II, III, IV
2) II, I, III, IV
3) III, I, II, IV
4) III, I, IV, II

ಸರಿ ಉತ್ತರಗಳನ್ನು ಅಂಡರ್‌ಲೈನ್ ಮೂಲಕ ಗುರುತಿಸಲಾಗಿದೆ

pramod@



Scanned with CamScanner